ಸುಂದರವಾಗಿ ಕಾಣಿಸತೊಡಗಿದಳು. ಆದರೆ ಅವಳ ಮುಖದಲ್ಲಿ ಬದಲಾವಣೆಯ ಆನಂದವಿರಲಿಲ್ಲ. ಏಕೆಂದರೆ ಆಕೆ ಒಂದು ಯಂತ್ರವಷ್ಟೆ.

ಅಡುಗೆ ಪದಾರ್ಥಗಳನ್ನು ಅಡುಗೆ ಮನೆಯಲ್ಲಿ ಒಂದೊಂದಾಗಿ ಜೋಡಿಸಿದೆ. ಎಲ್ಲವನ್ನೂ ವಸುಂಧರೆ ಗಮನಿಸತೊಡಗಿದಳು. ತರಕಾರಿಗಳನ್ನು ಫ್ರಿಡ್ಜ್‌ನಲ್ಲಿ ಇಟ್ಟು ಬೆಡ್‌ರೂಮಿಗೆ ಬಂದೆ. ಅಲ್ಲಿದ್ದ ವಾರ್ಡ್‌ರೋಬಿನ ಒಂದು ಭಾಗದಲ್ಲಿ ವಸುಂಧರೆಯ ಉಡುಪುಗಳನ್ನು ಜೋಡಿಸಿ ಹೊರಗೆ ಬಂದೆ. ವಸುಂಧರೆ ಹಿಂಬಾಲಿಸಿದಳು. "ವಸೂ... ಡ್ರೆಸ್ ಬದಲಾಯಿಸಿ ನೈಟಿ ತೊಟ್ಟುಕೋ.." ಎಂದೆ. ಕ್ಷಣ ಮಾತ್ರದಲ್ಲಿ ಬೆಡ್‌ರೂಮಿಗೆ ಹೋಗಿ ನೈಟಿ ತೊಟ್ಟು ಹೊರಬಂದಳು.

"ವಸೂ ಹೊಟ್ಟೆ ಹಸಿಯುತ್ತಿದೆ... ಏನಾದರೂ ಅಡುಗೆ ಮಾಡಬಹುದಾ..." ಎಂದೆ. "ಓಕೆ ಡಾರ್ಲಿಂಗ್... ಏನು ಮಾಡಬೇಕು..." ಎಂದು ಕೇಳಿದಳು. "ಏನಾದರೂ ಸರಿ..." ಎಂದೆ. ಆಕೆಗೆ ಅರ್ಥವಾಗಲಿಲ್ಲ. "ಏನು ಅಡುಗೆ ಮಾಡಬೇಕು?" ಎಂದು ಮತ್ತೆ ಪ್ರಶ್ನಿಸಿದಳು. ಅಂದರೆ ಆಕೆಗೆ ಸ್ವಂತ ನಿರ್ಧಾರ ತೆಗೆದುಕೊಳ್ಳುವ ಶಕ್ತಿಯಿಲ್ಲ ಎಂದು ನನಗೆ ತಿಳಿಯಿತು. "ಅನ್ನ, ತರಕಾರಿ ಹುಳಿ ಸಾಂಬಾರ್..." ಎಂದೆ. "ಎಷ್ಟು ಮಾಡಬೇಕು" ಎಂದು ಪುನಃ ಪ್ರಶ್ನಿಸಿದಳು. "ಒಬ್ಬರಿಗೆ ಸಾಕಾಗುವಷ್ಟು..." ಎಂದೆ. ಅಡುಗೆ ಮನೆಗೆ ತೆರಳಿದಳು. ನಾನು ನೋಡೋಣವೆಂದು ಟೀವಿ ನೋಡುತ್ತಾ ಹಾಲಿನಲ್ಲಿಯೇ ಕುಳಿತೆ.

ಸ್ವಲ್ಪ ಸಮಯದಲ್ಲಿಯೇ ಕುಕ್ಕರ್ ಕೂಗಿದ್ದು ಕೇಳಿಸಿತು ಮತ್ತು ಸಾಂಬಾರಿನ ಘಮ ಘಮ ವಾಸನೆ ಮೂಗಿಗೆ ಬಡಿಯಿತು. ಅದಾದ ಕೆಲವು ನಿಮಿಷಗಳಲ್ಲಿ ವಸುಂಧರೆ ಹೊರಗೆ ಬಂದು "ಡಾರ್ಲಿಂಗ್ ಊಟ ರೆಡಿ..." ಎಂದು ಹೇಳಿ ಡೈನಿಂಗ್ ಟೇಬಲ್ಲಿನ ಮೇಲೆ ಎಲ್ಲವನ್ನೂ ತಂದು ಜೋಡಿಸಿದಳು. ಹೊಟ್ಟೆ ಹಸಿದಿತ್ತು. ತಕ್ಷಣವೇ ತಟ್ಟೆಯ ಮುಂದೆ ಕುಳಿತೆ. ವಸುಂಧರೆ ಬಡಿಸಿದಳು. ವಸುಂಧರೆ ಅದ್ಭುತವಾಗಿ ಅಡುಗೆ ಮಾಡುತ್ತಾಳೆ ಎಂದು ಅನ್ನ ಸಾರು ಬಾಯಿಗಿಟ್ಟ ಮೇಲೆ ತಿಳಿಯಿತು. ಎಂತಹ ರುಚಿ! ನಾನು ಹೊಟ್ಟೆ ತುಂಬಾ ತಿಂದೆ. ಸ್ವಲ್ಪವನ್ನೂ ಉಳಿಸಲಿಲ್ಲ. ಆದರೆ ವಸುಂಧರೆ ಊಟ ಮಾಡುವಂತಿರಲಿಲ್ಲ.

ವಸುಂಧರೆ ಅಡುಗೆ ಮನೆಯನ್ನು ಹೊಕ್ಕು ಹೊರಬರಲು ಹತ್ತುನಿಮಿಷಗಳಾದವು. ನಾನು ಒಮ್ಮೆ ಅಡುಗೆ ಮನೆಯತ್ತ ಇಣುಕಿ ನೋಡಿದೆ. ಅಡುಗೆ ಮಾಡಿದ ಕುರುಹು ಕಾಣಿಸಲೇ ಇಲ್ಲ. ಅಷ್ಟು ಸ್ವಚ್ಛವಾಗಿತ್ತು!

ಇಬ್ಬರೂ ಸ್ವಲ್ಪ ಹೊತ್ತು ಟೀವಿ ನೋಡಿದೆವು. ನನಗೆ ನಿದ್ರೆ ಬರುತಿತ್ತು. "ವಸೂ ಮಲಗೋಣವೇ..." ಎಂದೆ. "ಓಕೆ ಡಾರ್ಲಿಂಗ್..." ಎಂದು ಕುಳಿತಲ್ಲಿಂದ ಎದ್ದಳು. ನಾನು ಟೀವಿ ಮತ್ತು ಲೈಟುಗಳನ್ನು ಆರಿಸಿ ಬೆಡ್‌ರೂಮಿಗೆ ನಡೆದೆ. ''ಬೆಳಿಗ್ಗೆ ನಾನು ಏಳೂವರೆಗೆ ಕಾರ್ಖಾನೆಗೆ ಹೋಗುತ್ತೇನೆ. ಒಬ್ಬರಿಗೆ ಆಗುವಷ್ಟು ಉಪ್ಪಿಟ್ಟು ಮಾಡಿದರೆ ಸಾಕು. ನಾನು ಆರು ಗಂಟೆಗೆ ಎದ್ದು ವಾಕ್ ಮಾಡಲು ಹೋಗುತ್ತೇನೆ" ಎಂದೆ. "ಓಕೆ ಡಾರ್ಲಿಂಗ್... ನಾನು ಸಮಯ ಕ್ಯಾಲುಕುಲೇಟ್ ಮಾಡಿ ಎದ್ದೇಳುತ್ತೇನೆ..." ಎಂದಳು. ನನಗಾಶ್ಚರ್ಯವಾಯಿತು. ನಾನು ಮಲಗಿ "ಇಲ್ಲಿ ಮಲಗು ವಸೂ..." ಎಂದು ನನ್ನ ಪಕ್ಕದ ಜಾಗ ತೋರಿಸಿದೆ. "ಓಕೆ ಡಾರ್ಲಿಂಗ್..." ಎಂದವಳು ಪಕ್ಕದಲ್ಲಿ ಬಂದು ಮಲಗಿ ಕಣ್ಣು ಮುಚ್ಚಿಯೇಬಿಟ್ಟಳು! ಕಾಲು ತುಂಬಾ ಹೊದಿಕೆ ಹೊದಿಸಿದೆ. ಅತ್ತಿತ್ತ ಮಿಸುಕಾಡಲೇ ಇಲ್ಲ. ಬೆಡ್‌ಲ್ಯಾಂಪ್ ಹತ್ತಿಸಿ ಗೋಡೆಯ ದೀಪ ಆರಿಸಿ ಅವಳ ಕೈಯನ್ನು ನನ್ನ ಕೈಯಲ್ಲಿ ಹಿಡಿದು ಮಲಗಿದೆ. ಒಂದು ಕ್ಷಣ ಆಕೆಯನ್ನು ದಿಟ್ಟಿಸಿದೆ. ಉಸಿರಾಡುತ್ತಿದ್ದಳು. ಪರೀಕ್ಷಿಸೋಣವೆಂದು ''ವಸೂ..." ಎಂದು ಮೆಲುದನಿಯಲ್ಲಿ ಕರೆದೆ. "ಯಸ್ ಡಾರ್ಲಿಂಗ್..." ಎಂದು ದಡಕ್ಕನೇ ಎದ್ದು ಕುಳಿತಳು! "ಏನಿಲ್ಲ ಮಲಗಿಕೋ..." ಎಂದೆ. ಮಲಗಿ ಕಣ್ಣು ಮುಚ್ಚಿದಳು. ನಾನೂ ಅವಳ ಕೈಹಿಡಿದುಕೊಂಡೇ ಮಲಗಿದೆ. ನನ್ನ ಮತ್ತು ವಸುಂಧರೆಯ ಲಿವಿಂಗ್ ಟುಗೆದರ್ ಜೀವನ ಪ್ರಾರಂಭವಾಯಿತು.